**P.W-4**

**ದಿನಾಂಕಃ 26-10-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಮುಖ್ಯ ವಿಚಾರಣೆ: ಸರ್ಕಾರಿ ಸಹಾಯಕ ಅಭಿಯೋಜಕರವರಿಂದಃ**

ನಾನು ಪೋಲಿಸರಿಗೆ ಘಟನೆಯ ಬಗ್ಗೆ ಹೇಳಿಕೆಯನ್ನು ಕೊಟ್ಟಿರುತ್ತೇನೆ.

**ಪಾಟೀ ಸವಾಲುಃ** ಆರೋಪಿತರ ಪರ ವಕೀಲರು ಕಾಲಾವಕಾಶ ಕೋರಿದ್ದರಿಂದ ಮುಂದೂಡಲಾಗಿದೆ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.

**P.W-1**

**ದಿನಾಂಕಃ 26-10-2024 ರಂದು ಸಾಕ್ಷಿದಾರರನ್ನು ಕರೆಯಿಸಿ ಪ್ರಮಾಣ ವಚನವನ್ನು ಬೋಧಿಸಲಾಯಿತು.**

**ಮುಂದುವರೆದ ಪಾಟೀ ಸವಾಲುಃ ಆರೋಪಿ ಪರ ವಕೀಲರಿಂದಃ**

ನಾನು ಖಾಸಗಿ ಶಾಲೆಯಲ್ಲಿ ಪಾರ್ಟಟೈಮ್ ಟೀಚರ್ ಆಗಿ ಕೆಲಸ ಮಾಡುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಖಾಸಗಿ ಶಾಲೆಯಲ್ಲಿ ಪಾರ್ಟಟೈಮ್ ಟೀಚರ್ ಆಗಿ ಕೆಲಸ ಮಾಡುತ್ತಿದ್ದರೂ ಸಹ ನನ್ನ ಕೇಸಿಗೆ ಅನಾನುಕೂಲವಾಗುತ್ತದೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಎರಡು ವರ್ಷಗಳಿಂದ ನ್ಯಾಯಾಲಯದಿಂದ ಸಮನ್ಸ ಮತ್ತು ವಾರೆಂಟ್ ಬಂದರೂ ಸಹ ನಾನು ನ್ಯಾಯಾಲಯಕ್ಕೆ ಹಾಜರು ಆಗಿರುವುದಿಲ್ಲ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನನ್ನ ತಂದೆಗೆ ಹಾರ್ಟ ಆಟ್ಯಾಕ್ ಆಗಿದ್ದರಿಂದ ಬಂದಿರುವುದಿಲ್ಲ ಎಂದು ಹೇಳುತ್ತಾರೆ. ಈ ವಿಚಾರವನ್ನು ನ್ಯಾಯಾಲಯಕ್ಕೆ ತಿಳಿಸಲು ನನಗೆ ಏನು ತೊಂದರೆ ಇರಲಿಲ್ಲ. ನಾನು ಉದ್ದೇಶ ಪೂರ್ವಕವಾಗಿ ಆರೋಪಿತರಿಗೆ ತೊಂದರೆ ಕೊಡುವುದಕ್ಕಾಗಿ ನ್ಯಾಯಾಲಯಕ್ಕೆ ಹಾಜರು ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಹರಪನಹಳ್ಳಿ ನ್ಯಾಯಾಲಯದಲ್ಲಿ ಜೀವನಾಂಶ ಕೋರಿ ನನ್ನ ಗಂಡನ ವಿರುದ್ಧ ಕೇಸು ಹಾಕಿರುತ್ತೇನೆ ಎಂದರೆ ಸರಿ. ಕಳೆದ 3 ವರ್ಷಗಳಿಂದ ನಾನು ಆ ಕೇಸಿನಲ್ಲಿ ನ್ಯಾಯಾಲಯಕ್ಕೆ ಹಾಜರಾಗದೇ ನನ್ನ ಗಂಡನನ್ನು ವಿನಃ ಕಾರಣ ನ್ಯಾಯಾಲಯಕ್ಕೆ ಅಲಿಸುತ್ತಿದ್ದೇನೆ ಎಂದರೆ ಸರಿಯಲ್ಲ. ಆ ಕೇಸು ಯಾವ ದಿನಾಂಕದಂದು ಇದೆ ಎಂದು ನನಗೆ ಗೊತ್ತಿಲ್ಲ. ಆ ಕೇಸಿನಲ್ಲಿ ಇವತ್ತು ಸಾಕ್ಷಿ ವಿಚಾರಣೆಗೆಂದು ನನ್ನ ಗಂಡ ಅದರಲ್ಲಿ ಹಾಜರು ಆಗಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನಾನು 3 ವರ್ಷಗಳಿಂದ ಆ ಕೇಸಿನಲ್ಲಿ ಹಾಜರಾಗಿರದ ಕಾರಣ ನನಗೆ ಆ ಕೇಸಿನ ದಿನಾಂಕ ಗೊತ್ತಿಲ್ಲ ಎಂದರೆ ಸರಿಯಲ್ಲ.

ನಾನು ನನ್ನ ಗಂಡನ ಜೊತೆ ರಾಣೇಬೆನ್ನೂರಿನಲ್ಲಿ ಕೇವಲ 3 ತಿಂಗಳು ಮಾತ್ರ ಒಟ್ಟಿಗೆ ವಾಸವಾಗಿದ್ದೆ ಎಂದರೆ ಸರಿಯಲ್ಲ. 3 ತಿಂಗಳ ನಂತರ ನಾನು ತವರು ಮನೆಗೆ ಹೋಗಿದ್ದು ನನ್ನನ್ನು ನನ್ನ ಗಂಡ ಮತ್ತು ಅವರ ಮನೆಯವರು ಎಷ್ಟು ಕರೆದರೂ ಸಹ ನಾನು ಜೀವನ ನಡೆಸಲು ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಮದುವೆ ಸಮಯದಲ್ಲಿ ಕೊಟ್ಟ ಬಾಂಡೆ ಸಾಮಾನು ಮತ್ತು ಇತರೆ ಸಾಮಾನುಗಳನ್ನು ಆರೋಪಿತರಿಂದ ನನಗೆ ಕೊಡಿಸಿ ಕೊಡಿ ಎಂದು ನಾನು ಹರಪನಹಳ್ಳಿಯ ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆಗೆ ಅರ್ಜಿ ಕೊಟ್ಟಿರುತ್ತೇನೆ ಎಂದರೆ ಸರಿ. ನನ್ನ ಉದ್ದೇಶ 2 ನೇ ಆರೋಪಿಯೊಂದಿಗೆ ಜೀವನ ನಡೆಸುವುದು ಆಗಿರುವುದಿಲ್ಲ ಎಂದರೆ ಸರಿಯಲ್ಲ. ಸಾಕ್ಷಿಗೆ ಹರಪನಹಳ್ಳಿಯ ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆಗೆ ನೀಡಿದ ಅರ್ಜಿಯ ದೃಡಿಕೃತ ಪ್ರತಿಯನ್ನು ತೋರಿಸಿದ್ದು ಅದನ್ನು ಸಾಕ್ಷಿ ಒಪ್ಪಿಕೊಂಡಿದ್ದರಿಂದ ಅದನ್ನು ನಿಡಿ-1 ಎಂದು ಅಭಿಮುಖವಾಗಿ ಗುರುತಿಸಲಾಯಿತು. 2015 ರಿಂದ ಇಲ್ಲಿಯವರೆಗೂ ನಾನು ನನ್ನ ತವರು ಮನೆಯಲ್ಲಿ ವಾಸವಾಗಿರುತ್ತೇನೆ ಎಂದರೆ ಸರಿ. ನಾನು ಯಾವುದೇ ನ್ಯಾಯಾಲಯದಲ್ಲಿ ನನ್ನ ವಿವಾಹದ ಹಕ್ಕುಗಳನ್ನು ಪುನರಸ್ಥಾಪಿಸುವುದಕ್ಕಾಗಿ 2 ನೇ ಆರೋಪಿಯ ವಿರುದ್ಧ ಯಾವುದೇ ಅರ್ಜಿ ಸಲ್ಲಿಸಿರುವುದಿಲ್ಲ.

ನಾನು 2 ನೇ ಆರೋಪಿಯ ವಿರುದ್ದ ಹರಪನಹಳ್ಳಿಯ ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆಗೆ ದಿಃ07-09-2015 ರಂದು ಒಂದು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ಸಾಕ್ಷಿ ಸದರಿ ದೂರಿನ ದೃಡಿಕೃತ ಪ್ರತಿಯನ್ನು ನೋಡಿ ಗುರುತಿಸಿದ್ದರಿಂದ ಅದನ್ನು ನಿಡಿ-2 ಎಂದು ಗುರುತಿಸಲಾಯಿತು. ಸದರಿ ದೂರಿನಲ್ಲಿ ದಿಃ 14-06-2015 ರಂದು ನಾನು ನನ್ನ ಮಗನನ್ನು ಕರೆದುಕೊಂಡು ಆರೋಪಿತರ ಮನೆಗೆ ಹೋದಾಗ ಅವರು ನನ್ನನ್ನು ಮನೆಯ ಒಳಗೆ ಸೇರಿಸಿಲ್ಲ ಎಂದು ದೂರಿನಲ್ಲಿ ಬರೆದಿರುತ್ತೇನೆ ಎಂದರೆ ಸರಿ. ಈ ಕೇಸಿನಲ್ಲಿ ನಾನು ದಿಃ 12-06-2015 ರಂದು ನನ್ನ ಮಗನನ್ನು ಕರೆದು ಕೊಂಡು ಆರೋಪಿತರ ಮನೆಗೆ ಹೋಗಿರುತ್ತೇನೆ ಎಂದು

ಹೇಳಿರುತ್ತೇನೆ ಎಂದರೆ ಸರಿ ಸಾಕ್ಷಿ ಮುಂದುವರೆದು ದಿಃ 14-06-2015 ರಂದು ಹೋಗಿರುತ್ತೇನೆ ಎಂದು ಹೇಳುತ್ತಾರೆ. ಹತ್ತು ವರ್ಷಗಳ ಹಿಂದೆ ಘಟನೆ ನಡೆದಿರುವುದರಿಂದ ಈಗ ನನಗೆ ದಿನಾಂಕ ಸರಿಯಾಗಿ ನೆನಪಿಲ್ಲ ಎಂದು ಹೇಳುತ್ತಾರೆ. ದಿಃ 31-08-2015 ರಂದು ರಾಣೆಬೆನ್ನೂರ ಶಹರ ಪೊಲೀಸ ಠಾಣೆಯಲ್ಲಿ ನಾನು ದೂರನ್ನು ಕೊಟ್ಟಿರುತ್ತೇನೆ ಹಾಗೂ ದಿಃ 07-09-2015 ರಂದು ನಾನು ಹರಪನಹಳ್ಳಿಯ ಮಹಿಳಾ ಮತ್ತು ಶಿಶು ಅಭಿವೃದ್ಧಿ ಇಲಾಖೆಗೆ ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿ. ನಾನು ನನ್ನ ತಂದೆ-ತಾಯಿಗೆ ಒಬ್ಬಳೆ ಮಗಳಾಗಿರುವುದರಿಂದ ನನ್ನ ಗಂಡನೂ ಸಹ ನಮ್ಮ ಜೊತೆಗೆ ಬಂದು ಇರಲಿ ಎಂದು ನಮ್ಮ ಉದ್ದೇಶ ಆಗಿತ್ತು ಎಂದರೆ ಸರಿಯಲ್ಲ. ನಮ್ಮ ಉದ್ದೇಶವನ್ನು ಈಡೇರಿಸಿಕೊಳ್ಳುವುದಕ್ಕಾಗಿ ಆರೋಪಿತರ ವಿರುದ್ಧ ಸುಳ್ಳು ದೂರುಗಳನ್ನು ಕೊಟ್ಟಿರುತ್ತೇವೆ ಎಂದರೆ ಸರಿಯಲ್ಲ. ದಿಃ 12-06-2015 ರಂದು ಅಥವಾ ದಿಃ 14-06-2015 ರಂದು ಆಗಲೀ ನಾನು ನನ್ನ ಮಗನನ್ನು ಕರೆದು ಕೊಂಡು ಆರೋಪಿತರ ಮನೆಗೆ ಹೋಗಿದ್ದೆ ಇಲ್ಲ ಎಂದರೆ ಸರಿಯಲ್ಲ. ಹರಪನಹಳ್ಳಿ ನ್ಯಾಯಾಲಯದಲ್ಲಿ 2 ನೇ ಆರೋಪಿಯ ವಿರುದ್ಧ ಜೀವನಾಂಶದ ಅರ್ಜಿಯನ್ನು ಸಲ್ಲಿಸಿದ ನಂತರ ಈ ಕೇಸನ್ನು ದಾಖಲಿಸಿರುತ್ತೇನೆ ಎಂದರೆ ಸರಿಯಲ್ಲ. ನಾನು 12-06-2015 ರಂದು ಅಥವಾ ದಿಃ 14-06-2015 ರಂದು ಆಗಲೀ ಆರೋಪಿತರ ಮನೆಗೆ ಹೋಗಿದ್ದೆ ಇಲ್ಲ ಹಾಗಾಗಿ ಅವರು ನನ್ನನ್ನು ತಡೆಯುವ ಪ್ರಸಂಗವೇ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ಅದೇ ರೀತಿ ಹತ್ತು ಲಕ್ಷ ರೂಪಾಯಿ ವರದಕ್ಷಿಣೆ ತೆಗೆದು ಕೊಂಡು ಬಂದರೆ ಮಾತ್ರ ಮನೆಯ ಒಳಗೆ ಬಿಟ್ಟು ಕೊಳ್ಳುತ್ತೇವೆ ಎಂದು ಹೇಳುವ ಪ್ರಸಂಗವೇ ಬರುವುದಿಲ್ಲ ಎಂದರೆ ಸರಿಯಲ್ಲ. ಆಗ ನನ್ನ ತಂದೆ-ತಾಯಿ ನನ್ನನ್ನು ಅಲ್ಲಿಯೇ ಬಿಟ್ಟು ಹೋಗುತ್ತೇವೆ ಎಂದು ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಬಿಟ್ಟು ಹೋದರೆ ಜೀವ ಸಹಿತ ಉಳಿಸುವುದಿಲ್ಲ ಎಂದು ಆರೋಪಿತರು ಬೆದರಿಕೆ ಹಾಕಿದ್ದರು ಎಂದರೆ

ಸರಿಯಲ್ಲ. ಆಗ ಅಲ್ಲಿಯ ಅಕ್ಕ-ಪಕ್ಕದವರು ಬಿಡಿಸಿ ನನ್ನನ್ನು ತವರು ಮನೆಗೆ ಕಳುಹಿಸಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆ ರೀತಿ ಘಟನೆ ನಿಜವಾಗಿಯೂ ದಿಃ 12-06-2015 ರಂದು ನಡೆದಿದ್ದರೆ ಅದೇ ದಿನ ನಾನು ದೂರು ಕೊಡುತ್ತಿದ್ದೆ ಎಂದರೆ ಸರಿಯಲ್ಲ ಸಾಕ್ಷಿ ಮುಂದುವರೆದು ನಾವು ಹಲವು ಬಾರಿ ತಿಳುವಳಿಕೆ ಹೇಳಿದ ನಂತರವೂ ನನ್ನ ಗಂಡ ಸರಿ ಹೋಗದೇ ಇದ್ದಾಗ ದೂರು ಕೊಟ್ಟಿರುತ್ತೇವೆ ಎಂದು ಹೇಳುತ್ತಾರೆ. ಈ ವಿಚಾರವನ್ನು ನಾನು ನನ್ನ ದೂರಿನಲ್ಲಿ ಹೇಳಿಲ್ಲ ಎಂದರೆ ಸರಿಯಲ್ಲ. ನನ್ನ ಮಾವ ರುದ್ರಪ್ಪ ರವರ ಮಾತಿನಂತೆ ಆರೋಪಿತರ ವಿರುದ್ಧ ಸುಳ್ಳು ದೂರನ್ನು ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ಯಾವತ್ತೂ ಸಹ ನನಗೆ ವರದಕ್ಷಿಣೆ ತೆಗೆದು ಕೊಂಡು ಬಾ ಎಂದು ಕೇಳಿರುವುದಿಲ್ಲ ಎಂದರೆ ಸರಿಯಲ್ಲ. ನನ್ನ ಮತ್ತು 2 ನೇ ಆರೋಪಿಯ ನಡುವೆ ವರದಕ್ಷಿಣೆ ವಿಚಾರವಾಗಿ ಎಂದೂ ಮನಸ್ತಾಪ ಆಗಿರುವುದಿಲ್ಲ ಎಂದರೆ ಸರಿಯಲ್ಲ.

ಸಾಮಾನ್ಯವಾಗಿ ಗರ್ಬಿಣಿಯಾದ ನಂತರ ತವರು ಮನೆಗೆ ಹೋಗುತ್ತಾರೆ ಎಂದರೆ ಸಾಕ್ಷಿ ಪರಿಸ್ಥಿತಿ ಇದ್ದ ಹಾಗೆ ನೋಡಿಕೊಂಡು ಹೋಗುತ್ತಾರೆ ಎಂದು ಹೇಳುತ್ತಾರೆ. ಸಾಮಾನ್ಯವಾಗಿ ಗರ್ಭಿಣಿಯಾದ ನಂತರ ಪ್ರತಿ ತಿಂಗಳು ವೈದ್ಯರ ಬಳಿ ತೋರಿಸುತ್ತಾರೆ ಎಂದರೆ ಸರಿ. ಕೊಟ್ಟೂರಿನಲ್ಲಿ ವೈದ್ಯರು ನಾನು ಗರ್ಭಿಣಿಯಾಗಿದ್ದೇನೆ ಎಂದು ಮೊದಲ ಬಾರಿಗೆ ಹೇಳಿರುತ್ತಾರೆ. ನಂತರ ನಾನು ನನ್ನ ಸಹೋದರ ಡಾ.ಅರುಣ ಕುಮಾರ ರವರ ಬಳಿ ತೋರಿಸುತ್ತಾ ಬಂದಿರುತ್ತೇನೆ. ಗರ್ಭಿಣಿಯಾದ ನಂತರ ನಾನು 2 ನೇ ಆರೋಪಿಯ ಜೊತೆಗೆ ವಾಸವಾಗಿದ್ದೆ ಇಲ್ಲ ಎಂದರೆ ಸರಿಯಲ್ಲ. ಆ ಬಗ್ಗೆ ಡಾ.ಅರುಣ ಕುಮಾರ ಬಳಿ ದಾಖಲೆ ಇರಬಹುದು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ಗರ್ಭಿಣಿಯಾದ ನಂತರ ನನ್ನ ಗಂಡ ರಾಣೇಬೆನ್ನೂರಿನ ಸಾಯಿ ಆಸ್ಪತ್ರೆಗೆ ಕರೆದು ಕೊಂಡು ಹೋಗಿದ್ದರು. ನನ್ನ ಗಂಡ ನನ್ನನ್ನು ಸಾಯಿ ಆಸ್ಪತ್ರೆಯಲ್ಲಿ ತೋರಿಸಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಮತ್ತು ನನ್ನ ಅತ್ತೆ ನನ್ನನ್ನು ಗರ್ಭಪಾತ

ಮಾಡಿಸುವಂತೆ ಕೇಳಿಯೇ ಇಲ್ಲ ಎಂದರೆ ಸರಿಯಲ್ಲ. ಆರೋಪಿತರು ನನಗೆ ಯಾವತ್ತೂ ಗರ್ಭಪಾತ ಮಾಡಿಸು ಎಂದು ಹೇಳಿದ್ದೆ ಇಲ್ಲ ಎಂದರೆ ಸರಿಯಲ್ಲ. ಗರ್ಭಪಾತ ಮಾಡಿಸಿಕೊ ಎಂದು ನನಗೆ ಆರೋಪಿತರು ಮಾನಸಿಕ ಹಿಂಸೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. ಆರೋಪಿತರು ನನನ್ನನ್ನು ಎಳೆದಾಡಿ ಹಲ್ಲೆ ಮಾಡಿರುತ್ತಾರೆ ಮತ್ತು ನಾನು ಆಸ್ಪತ್ರೆಗೂ ಸಹ ದಾಖಲಾಗಿದ್ದೆ. ಈ ದೂರಿನಲ್ಲಿ ಆರೋಪಿತರು ಹಲ್ಲೆ ಮಾಡಿದ್ದರಿಂದ ನಾನು ಆಸ್ಪತ್ರೆಗೆ ದಾಖಲಾಗಿದ್ದೆ ಎಂದು ಎಲ್ಲಿಯೂ ಬರೆಸಿಲ್ಲ ಎಂದರೆ ಸರಿ. ಆಸ್ಪತ್ರೆಯಲ್ಲಿ ದಾಖಲಾದ ಬಗ್ಗೆ ದಾಖಲೆಯನ್ನು ಈ ಕೇಸಿನಲ್ಲಿ ಹಾಜರು ಪಡಿಸಿರುವುದಿಲ್ಲ. ಆರೋಪಿತರು ನನಗೆ ತೊಂದರೆ ಕೊಟ್ಟಿದ್ದರೆ ಆಗಲೇ ಪಿರ್ಯಾದಿ ಕೊಡಬೇಕು ಎಂದು ನನಗೆ ಗೊತ್ತಿತ್ತು ಎಂದರೆ ಸರಿಯಲ್ಲ. ಆ ರೀತಿ ಘಟನೆಯೇ ಆಗಿರದೇ ಇದ್ದುದರಿಂದ ನಾನು ಪಿರ್ಯಾದಿ ಕೊಡುವ ಪ್ರಮೇಯವೇ ಬಂದಿರುವುದಿಲ್ಲ ಎಂದರೆ ಸರಿಯಲ್ಲ. ನಾನು ಯಾವುದೇ ಆಧಾರವಿಲ್ಲದೇ ಆರೋಪಿತರ ವಿರುದ್ಧ ಸುಳ್ಳು ಆರೋಪ ಮಾಡಿರುತ್ತೇನೆ ಎಂದರೆ ಸರಿಯಲ್ಲ. ಆರೋಪಿತರು ನೀಡಿದ ಹಿಂಸೆಯನ್ನು ಸಹಿಸಿಕೊಂಡು ಇರುವ ಯಾವುದೇ ಸಂಧರ್ಬ ಬಂದಿರಲಿಲ್ಲ ಎಂದರೆ ಸರಿಯಲ್ಲ.

ನಾನು ಪೋಲಿಸ್ ಠಾಣೆಗೆ ದೂರನ್ನು ಕೊಟ್ಟ ನಂತರ ಮತ್ತೆ ಠಾಣೆಗೆ ಹೋಗಿರುವುದಿಲ್ಲ ಮತ್ತು ನನ್ನನ್ನು ಕರೆಯಿಸಿ ವಿಚಾರಣೆ ಮಾಡಿರುವುದಿಲ್ಲ. ಮದುವೆಯ ಸಮಯದಲ್ಲಿ ನನ್ನ ತಂದೆ-ತಾಯಿಯವರು ಕೊಟ್ಟಿದ್ದ ಬಂಗಾರವನ್ನು ನಾನು ಆರೋಪಿತರಿಗೆ ಕೊಟ್ಟಿರಲಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿ ನನ್ನ ಮದುವೆಗಿಂತ ಮುಂಚೆಯಿಂದಲೇ ಬೆಂಗಳೂರಿನಲ್ಲಿ ಕೆಲಸ ಮಾಡುತ್ತಿದ್ದರು ಎಂದರೆ ಸರಿ. ಅವರು ಬಿ.ಇ ಇಂಜಿನಿಯರಿಂಗ್ ಮಾಡಿದ್ದು ತಿಂಗಳಿಗೆ 1 ½ ಲಕ್ಷಕ್ಕಿಂತ ಹೆಚ್ಚು ಸಂಬಳ ಇತ್ತು ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಮತ್ತು 2 ನೇ ಆರೋಪಿಯ ಮದುವೆಯಾದ ನಂತರ 3 ನೇ ಆರೋಪಿಯ ಮದುವೆ ಆಗಿರುತ್ತದೆ ಎಂದರೆ ಸರಿ. 3 ನೇ ಆರೋಪಿ ಮತ್ತು ಅವನ ಹೆಂಡತಿ

ಅನ್ಯೂನ್ಯವಾಗಿರುತ್ತಾರೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲಎಂದು ಹೇಳುತ್ತಾರೆ. 3 ನೇ ಆರೋಪಿಯ ಹೆಂಡತಿಯ ಪರಿಚಯ ನನಗೆ ಇರುವುದಿಲ್ಲ. ಅವರು ಯಾವ ಊರಿನವರು ಮತ್ತು ಅವರ ತಂದೆ-ತಾಯಿ ಯಾರು ಎಂದು ನನಗೆ ಗೊತ್ತಿರುವುದಿಲ್ಲ. ನಾನು ಅವರ ಮದುವೆಗೆ ಹೋಗಿಲ್ಲ ಎಂದರೆ ಸಾಕ್ಷಿ ನನ್ನನ್ನು ಕರೆದಿಲ್ಲ ಎಂದು ಹೇಳುತ್ತಾರೆ. ನನ್ನ ಮದುವೆಯಾಗಿ ಒಂದು ವರ್ಷದೊಳಗೆ 3 ನೇ ಆರೋಪಿಯ ಮದುವೆಯಾಗಿದೆ ಎಂದರೆ ಸಾಕ್ಷಿ ನನಗೆ ಗೊತ್ತಿಲ್ಲ ಎಂದು ಹೇಳುತ್ತಾರೆ. ನನ್ನ ಗಂಡನೇ ನನ್ನನ್ನು ನೋಡಿಕೊಳ್ಳದೇ ಇರುವ ಕಾರಣ 3 ನೇ ಆರೋಪಿಯ ಹೆಂಡತಿಯ ಬಗ್ಗೆ ತಿಳಿದು ಕೊಳ್ಳುವ ಪ್ರಯತ್ನ ನಾನು ಪಟ್ಟಿರುವುದಿಲ್ಲ. ನಾನು ಅವರ ಮನೆಯಲ್ಲಿ ವಾಸವಾಗಿದ ಕಾರಣ 3 ನೇ ಆರೋಪಿಯ ಹೆಂಡತಿಯ ಬಗ್ಗೆ ನನಗೆ ಗೊತ್ತಿರುವುದಿಲ್ಲ ಎಂದರೆ ಸರಿಯಲ್ಲ. 3 ನೇ ಆರೋಪಿಯ ಮದುವೆಯಾಗಿದ್ದಾಗಿನಿಂದಲೂ 1 ನೇ ಆರೋಪಿ ಅವರ ಜೊತೆ ವಾಸವಾಗಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಬಂಗಾರವನ್ನು ಅಡವಿಟ್ಟು ಸಾಲ ತೆಗೆಯುುವ ಪರಿಸ್ಥಿತಿ ಆರೋಪಿತರಿಗೆ ಬಂದಿಲ್ಲ ಎಂದರೆ ಸರಿಯಲ್ಲ. 1 ಮತ್ತು 2 ನೇ ಆರೋಪಿತರು ನನ್ನ ಓಡವೆಗಳನ್ನು ಮುತ್ತೂಟ್ ಫೈನಾನ್ಸ ನಲ್ಲಿ ಅಡವಿಟ್ಟು ಸಾಲ ಪಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಫೈನಾನ್ಸ ನಲ್ಲಿ ವಿಚಾರಿಸಿದರೆ ದಾಖಲೆ ಇರಬಹುದು. ಸದರಿ ಬಂಗಾರದ ಬಗ್ಗೆ ನಾನು ವಿಚಾರಿಸಿದಾಗ ಆರೋಪಿತರು ನನಗೆ ಅವಾಚ್ಯ ಶಬ್ದಗಳಿಂದ ಬೈದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನನ್ನು ಆರೋಪಿತರು ಕಾಲುಕಸದ ಹಾಗೆ ನೋಡಿಕೊಳ್ಳುತ್ತಿದ್ದರು ಎಂದು ನಾನು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಂತರ ಆರೋಪಿತರು ನನ್ನ ಓಡವೆಗಳನ್ನು ಫೈನಾನ್ಸನಿಂದ ಬಿಡಿಸಿಕೊಂಡು ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಭರಣಗಳನ್ನು ಬಿಡಿಸಿಕೊಂಡು ಬಂದಾಗ ಒಂದು ನಕ್ಲೇಸ್ ಮುರಿದಿತ್ತು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಮಗ ಕೆ.ಇ.ಬಿ ಯಲ್ಲಿ ನೌಕರಿ ಇದ್ದು ಆತನಿಗೆ ಸಾಕಷ್ಟು ಬಂಗಾರ ವರದಕ್ಷಿಣೆ

ಕೊಟ್ಟು ಮದುವೆ ಮಾಡಿಕೊಡಲು ತುಂಬಾ ಜನರು ಇದ್ದರು ಎಂದು 1 ನೇ ಆರೋಪಿ ಹೇಳಿದ್ದರು ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆರೋಪಿತರು ನನ್ನನ್ನು ದೂಡಾಡಿ ಹೊಡೆದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಅಕ್ಕ-ಪಕ್ಕದ ಜನರು ಬಂದು ನನ್ನನ್ನು ಬಿಡಿಸಿಕೊಂಡು ಆಸ್ಪತ್ರೆಗೆ ಕರೆದು ಕೊಂಡು ಬಂದಿರುತ್ತಾರೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಆಸ್ಪತ್ರೆಯಲ್ಲಿ ನಾನು ಆ ಬಗ್ಗೆ ಚಿಕಿತ್ಸೆ ಪಡೆದಿರುತ್ತೇನೆ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಚಿಕಿತ್ಸೆ ಪಡೆದ ಬಗ್ಗೆ ಪೋಲಿಸರ ಮುಂದೆ ದಾಖಲೆ ಹಾಜರು ಪಡಿಸಿಲ್ಲ ಎಂದರೆ ಸಾಕ್ಷಿ ಹಾಜರು ಪಡಿಸಬೇಕು ಎಂದು ನನಗೆ ಗೊತ್ತಾಗಿಲ್ಲ ಎಂದು ಹೇಳುತ್ತಾರೆ. ಈಗಾದರೂ ಆ ರೀತಿ ದಾಖಲೆ ಇದ್ದರೆ ನ್ಯಾಯಾಲಯಕ್ಕೆ ಹಾಜರು ಪಡಿಸಲು ತೊಂದರೆ ಇರುವುದಿಲ್ಲ.

ದೂರನ್ನು ನಾನೇ ಕೈಯಾರೆ ಬರೆದಿರುತ್ತೇನೆ. ನನಗೆ ಈ ರೀತಿ ಪಿರ್ಯಾದಿ ಕೊಡುವ ಬಗ್ಗೆ ಯಾವುದೇ ಜ್ಞಾನ ಇರುವುದಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಹೇಳಿ ದೂರನ್ನು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನಾನು ಹೇಳಿದಂತೆ ಆರೋಪಿತರು ನನಗೆ ವರದಕ್ಷಿಣೆ ತರುವಂತೆ ಕಿರುಕುಳ ನೀಡಿದ್ದೆ ಇಲ್ಲ , ಗರ್ಭಪಾತ ಮಾಡಿಸುವಂತೆ ಹೇಳಿದ್ದೆ ಇಲ್ಲ , ದಿಃ 12-06-2015 ರಂದು ನಾನು ಅವರ ಮನೆಗೆ ಹೋಗಿದ್ದೆ ಇಲ್ಲ ಮತ್ತು ಆರೋಪಿತರು ನನ್ನನ್ನು ತಳ್ಳಾಡಿ ಬೈದಿದ್ದೆ ಇಲ್ಲ ಎಂದರೆ ಸರಿಯಲ್ಲ. ಪೋಲಿಸರು ಆರೋಪಿತರ ವಿರುದ್ಧ ಕಾಯ್ದೆ ಕಾನೂನು ಕ್ರಮ ಕೈಗೊಳ್ಳುವುದಕ್ಕಾಗಿ ಹೇಳಿ ದೂರನ್ನು ಬರೆಸಿರುತ್ತಾರೆ ಎಂದರೆ ಸರಿಯಲ್ಲ. ನನ್ನ ಮದುವೆಯ ಕಾಲಕ್ಕೆ ನನ್ನ ತಂದೆ-ತಾಯಿಯವರು 250 ಗ್ರಾಂ ಬಂಗಾರ ಮತ್ತು 2 ಕೆ.ಜಿ ಬೆಳ್ಳಿಯನ್ನು ಆರೋಪಿತರಿಗೆ ಕೊಟ್ಟಿದ್ದೆ ಇಲ್ಲ ಎಂದರೆ ಸರಿಯಲ್ಲ. ಬಂಗಾರ ಮತ್ತು ಬೆಳ್ಳಿ ಖರೀದಿ ಮಾಡಿದ ಬಗ್ಗೆ ಯಾವುದೇ ದಾಖಲೆ ಕೊಟ್ಟಿಲ್ಲ ಎಂದರೆ ಸಾಕ್ಷಿ ಮಲಬಾರ ಗೋಲ್ಡ ನಲ್ಲಿ ಖರೀದಿಸಿರುತ್ತೇವೆ ಹಾಗೂ ದಾಖಲೆಗಳು ಇವೆ ಎಂದು ಹೇಳುತ್ತಾರೆ. ಮದುವೆಗೆ 8 ಲಕ್ಷ ರೂಪಾಯಿ ಖರ್ಚು ಮಾಡಿರುತ್ತೇವೆ ಎಂದು ಸುಳ್ಳು

ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ಸಂಪ್ರದಾಯದ ಪ್ರಕಾರ ಹೆಣ್ಣಿನ ಮನೆಯವರೆಗೆ ಮದುವೆ ಖರ್ಚು ನೋಡಿಕೊಳ್ಳುತ್ತಾರೆ ಎಂದರೆ ಸಾಕ್ಷಿ ಆ ರೀತಿ ಸಂಪ್ರದಾಯ ಇಲ್ಲ ಎಂದು ಹೇಳುತ್ತಾರೆ. ಲಗ್ನವನ್ನಷ್ಟೆ ಮಾಡಿಕೊಡಿ ಎಂದು ಮಾತುಕತೆಯಾಗಿತ್ತು ಎಂದರೆ ಸರಿ ಸಾಕ್ಷಿ ಮುಂದುವರೆದು ಬರಬರುತ್ತಾ ಬೇರೆ-ಬೇರೆ ಬೇಡಿಕೆ ಇಟ್ಟರು ಎಂದು ಹೇಳುತ್ತಾರೆ. ಆ ರೀತಿ ಆರೋಪಿತರು ಯಾವುದೇ ಬೇಡಿಕೆ ಇಟ್ಟಿರುವುದಿಲ್ಲ ಎಂದರೆ ಸರಿಯಲ್ಲ. ದೂರಿನಲ್ಲಿ ಈ ಬಗ್ಗೆ ಬರೆದಿರುತ್ತೇನೆ. ಆ ರೀತಿ ನನ್ನ ದೂರಿನಲ್ಲಿ ಬರೆಸಿಲ್ಲ ಎಂದರೆ ಸರಿಯಲ್ಲ.

ನಿಪಿ-13 ನನ್ನ ತಂದೆಯವರ ಹೆಸರಿನಲ್ಲಿ ಇಲ್ಲ ಎಂದರೆ ಸರಿ ಆದರೆ ಸಾಕ್ಷಿ ಅದು ನನ್ನ ತಾತನ ಹೆಸರಿನಲ್ಲಿ ಇದೆ ಅವರೇ ಓಡವೆ ಕೊಡಿಸಿರುತ್ತಾರೆ ಎಂದು ಹೇಳುತ್ತಾರೆ. ನಿಪಿ-13 ನ್ನು ಈ ಕೇಸಿಗೊಸ್ಕರ ಸೃಷ್ಟಿ ಮಾಡಿ ಹಾಜರು ಪಡಿಸಿರುತ್ತೇವೆ ಎಂದರೆ ಸರಿಯಲ್ಲ. ನಿಪಿ-14 ರಿಂದ ನಿಪಿ-16 ರಲ್ಲಿ ಯಾರ ಹೆಸರು ಇರುವುದಿಲ್ಲ ಅದು ಗೊಲ್ಡ ಎಸ್ಟಿಮೇಟ್ ಆಗಿರುತ್ತದೆ ಎಂದರೆ ಸಾಕ್ಷಿ ಅಲ್ಲಿ ತಾಳಿ ಮಾತ್ರ ಖರೀದಿಸಿರುತ್ತೇವೆ ಎಂದು ಹೇಳುತ್ತಾರೆ. ಅವು ಗೊಲ್ಡ ಎಸ್ಟಿಮೇಟ್ ಆಗಿರುತ್ತದೆ ಎಂದರೆ ಸರಿಯಲ್ಲ. ಅದರಲ್ಲಿ ಹಣ ಸ್ವೀಕರಿಸಿದ ಬಗ್ಗೆ ನಮೂದು ಇಲ್ಲ ಎಂದರೆ ಸರಿಯಲ್ಲ. ನಿಪಿ-17 ರಲ್ಲಿ ಹಾಲನಗೌಡ ಹೆಸರು ಇರುತ್ತದೆ ಎಂದರೆ ಸಾಕ್ಷಿ ಅವರು ನನ್ನ ತಾತ ಎಂದು ಹೇಳುತ್ತಾರೆ. ಅವುಗಳನ್ನು ನನ್ನ ತಾತ ಕೊಡಿಸಿರುತ್ತಾರೆ. ನಿಪಿ-18 ನ್ನೂ ಸಹ ಗೊಲ್ಡ ಎಸ್ಟಿಮೇಟ್ ಆಗಿರುತ್ತದೆ ಎಂದರೆ ಸರಿಯಲ್ಲ. ನಿಪಿ-19 ಮತ್ತು 20 ನನ್ನ ತಂದೆಯ ಹೆಸರಿನಲ್ಲಿ ಇರುತ್ತವೆ. ನಿಪಿ-19 ಮತ್ತು 20 ದಿಃ 29-01-2015 ರ ದಾಖಲೆ ಎಂದರೆ ಸಾಕ್ಷಿ ಮದುವೆಗೆ ಕೊಡಿಸಿದ್ದು ಎಂದು ಹೇಳುತ್ತಾರೆ. ನಿಪಿ-21 ಜಿ.ಪಿ.ಎಫ್ ಹಣ ಸ್ವೀಕರಿಸಿದ ಬಗ್ಗೆ ದಾಖಲೆ ಅಲ್ಲ ಎಂದರೆ ಸರಿಯಲ್ಲ. ಈ ದಾಖಲೆಗಳನ್ನು ದೂರು ಕೊಡುವ ದಿನಾಂಕದಂದು ಕೊಟ್ಟಿಲ್ಲ ಎಂದರೆ ಸರಿಯಲ್ಲ. ಪೋಲಿಸರು ಕೇಳಿದ ನಂತರ ದಾಖಲೆ ಸೃಷ್ಟಿ ಮಾಡಿಕೊಂಡಿರುತ್ತೇನೆ ಎಂದರೆ ಸರಿಯಲ್ಲ. ಮದುವೆಗೆ 8 ಲಕ್ಷ ಖರ್ಚು ಮಾಡಿದ

ಬಗ್ಗೆ ಯಾವುದೇ ದಾಖಲೆ ಇಲ್ಲ ಎಂದರೆ ಸರಿಯಲ್ಲ. ನನ್ನ ತಂದೆ, ನನ್ನ ಮಾವ ಮತ್ತು ನಾನು ಸೇರಿಕೊಂಡು ಒಂದು ಘಟನೆ ಹುಟ್ಟಿಸಿಕೊಂಡು ಆರೋಪಿತರ ವಿರುದ್ಧ ಸುಳ್ಳು ಪಿರ್ಯಾದಿಯನ್ನು ದಾಖಲಿಸಿ ಸುಳ್ಳು ಸಾಕ್ಷ್ಯ ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನನ್ನ ಗಂಡ ಹೊಟೇಲ್ ಖಾನಾವಳಿಯಲ್ಲಿ ಊಟ ಮಾಡಿಕೊಂಡು ಕೆಲಸ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ನಾನು 2 ನೇ ಆರೋಪಿಗೆ ವೈವಾಹಿಕ ಜೀವನದಿಂದ ದೂರು ಇಟ್ಟು ಮೋಸ ಮಾಡಿ ಹಿಂಸೆ ಕೊಟ್ಟಿರುತ್ತೇನೆ ಎಂದರೆ ಸರಿಯಲ್ಲ. 2 ನೇ ಆರೋಪಿ ಮದ್ಯಪಾನ ಮಾಡುತ್ತಿದ್ದ ಎಂದು ಸುಳ್ಳು ಹೇಳುತ್ತಿದ್ದೇನೆ ಎಂದರೆ ಸರಿಯಲ್ಲ. ನಾನು ಹೇಳುವ ರೀತಿಯಲ್ಲಿ ಆರೋಪಿತರು ಯಾವುದೇ ಅಪರಾಧ ಮಾಡಿಲ್ಲದೇ ಇದ್ದರೂ ಸಹ 2015 ನೇ ಇಸವಿಯಿಂದ ಅವರನ್ನು ನ್ಯಾಯಾಲಯಕ್ಕೆ ಅಲೆಸುತ್ತಿದ್ದೇನೆ ಎಂದರೆ ಸರಿಯಲ್ಲ.

**ಮರು ವಿಚಾರಣೆಃ ಏನೂ ಇಲ್ಲ.**

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತ ಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ.)

ಓ. ಹೇ. ಕೇ. ಸರಿ ಇದೆ.

2 ನೇ ಹೆಚ್ಚುವರಿ ಹಿರಿಯ ದಿವಾಣಿ ನ್ಯಾಯಾಧೀಶರು,
ಮತ್ತು ಜೆ.ಎಂ.ಎಫ್.ಸಿ ರಾಣೇಬೆನ್ನೂರು.